ತಾರೀಖು ಮೇ 1907.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ — ಸ 1907—08ನೆ ಸಾಲಿನಲ್ಲಿ ಶಿವಮೊಗ್ಗಾ ಟವ್ನ್ ಮ್ಯುನಿಸಿಪಾಲಿಟಿ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿಗಳ ಮೇಲೆ ಟೋಲ್ ವಸೂಲ್ ಮಾಡತಕ್ಕ ಹಕ್ಕನ್ನು 1907ನೆ ಜೂ 10ನೆ ತಾರೀಖಿನ ದಿವಸ ಮಧ್ಯಾಹ್ನದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಮ್ಯುನಿಸಿಪಲ್ ಬೋರ್ಡ್ ಪ್ರೆಸಿಡೆಂಟರವರ ಕಚ್ಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚಿಗೆ ತಪಸೀಲ್‌ಗಳನ್ನು 1907ನೆ ಇಸವಿ ಮೇ 2ನೆ ತಾರೀಖು ಮೈಸೂರ ಗೆಜೆಟ್ಟಿನ 2ನೆ ಭಾಗದ 153, 154ನೆ ನಂಬರ್ ಪುಟದಲ್ಲಿ ಪ್ರಕಾಶಿತ ಆಗಿರುವ 1907ನೆ ಇಸವಿ ಏಪ್ರಿಲ್ 1ನೆ ಮಕರ್ರಂ ಇಸ್ತಿಹಾರ್‌ನಾಮೆಯ ಮೂಲಕ ತಿಳಿದುಕೊಳ್ಳಬಹುದು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಸ 1907ನೆ ಇಸವಿ ಮೇ 7ನೆ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, — ಸ 1907ನೆ ಇಸವಿ ಜುಲೈ ಗುರ್ಯೇ ಲಾಗಾಯಿತು 1908ನೆ ಜೂ ಆಖೈರು ವರಿಗೆ ಹರಿಹರ ಸೇತುವೆ ಮೇಲೆ ಟೋಲ್ ವಸೂಲ್ ಮಾಡತಕ್ಕ ಹಕ್ಕನ್ನು ಚೌತ್ತಿ ಸಾಲ್ ಜೂ 1ನೆ ತಾರೀಖಿನಲ್ಲಿ ಹರಿಹರದ ಡೆಪ್ಯುಟಿ ಅಮಲ್ದಾರ್ರ ಕಚೇರಿಯಲ್ಲಿ ಆ ದಿನ ಮಧ್ಯಾಹ್ನ ಮೂರು ಘಂಟೆಯಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಯವರು ಅಥವಾ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಯವರು ಹರಾಜು ಮಾಡಿಸುತ್ತಾರೆ.

2. ಚಡ ಸವಾಲನ್ನು ಗವರ್ನಮೆಂಟ್ ಮುಂಜೂರಿಗೆ ವಳಪಟ್ಟು ಡೆಪ್ಯುಟಿ ಕಮಿಷನರ್ ಯವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲಿ ಮುಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡೆಪ್ಯುಟಿ ಕಮಿಷನರ್ ಯವರ ಯಜಮಾನ್ಯರಿಯಲ್ಲಿ ಇರುತ್ತೆ.

3. ಡೆಪ್ಯುಟಿ ಕಮಿಷನರ್ ಯವರು ಯಾರ ಸವಾಲುಗಳು ಅಂಗೀಕರಿಸುತ್ತಾರೋ ಅಂಥವರು ರೂಪಾಯಿಗೆ ಬಂದು ಆಣೆಯಂತೆ ಲೋಕಲ್ ಸೆಸ್ ಸಹಿತವಾಗಿ ಸವಾಲು ಮೊಬಲಗು ಪೈಕಿ ಕಾಲು ಭಾಗದ ಮೊಬಲಗು ತಕ್ಷಣ ಡಿಪಾಜಿಟ್ ಇಡಬೇಕು. ಗವರ್ನಮೆಂಟಿನಿಂದ ಮುಂಜೂರಾದ ಕೂಡ್ಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹಿತವಾಗಿ 9 ಸಮವಾದ ಖಿಸ್ತುಗಳಲ್ಲಿ ದಿವಾಣ ಗೆರೆ ತಾಲ್ಲೂಕು ಟ್ರೆಜರೀಗೆ ಪಾವತಿ ಮಾಡಬೇಕು. ಬಂಗನೇ ಖಿಸ್ತು ಮೊಬಲಗು 1908ನೆ ಆಗಸ್ಟ್ ತಾರೀಖು 10ಕ್ಕೆ ಸುರು ಆಗುತ್ತೆ. ಬಾಕಿ ಖಿಸ್ತುಗಳು ಆಯಾಯ ತಿಂಗಳ ಹತ್ತನೇ ತಾರೀಖಿನಲ್ಲಿ ಪಾವತಿಯಾಗತಕ್ಕದ್ದು. ಡಿಪಾಜಿಟ್ ಮೊಬಲಗು ಹತ್ತು ಜನ್ನೊಂದು ಹನ್ನೆರಡನೇ ಖಿಸ್ತುಗಳಿಗೆ ಉಪಯೋಗಿಸಿಕೊಳ್ಳಲ್ಪಡುವದು. ಹರಾಜುದಾರನು ಖಿಸ್ತು ಮೊಬಲಗು ಸಕಾಲಕ್ಕೆ ಪಾವತಿ ಮಾಡುವ ಬಗ್ಯೆ ಇಬ್ಬರು ಜಾಮೀನುದಾರ್ರನ್ನು ಕೊಡಬೇಕು, ಮತ್ತು ಹರಾಜು ಮಂಜೂರಾದ್ದು ತಿಳಿಸಿದ ಲಾಗಾಯತು ಮೂರು ದಿವಸದಲ್ಲಿ ಸರಿಯಾದ ಸ್ಟ್ಯಾಂಪು ಕಾಗದದ ಮೇಲೆ ಬಂದು ಕರಾರು ಬರದುಕೊಡಬೇಕು. ಈ ಷರತ್ತುಗಳಿಗೆ ತಪ್ಪಿದ ಪಕ್ಷದಲ್ಲಿ ಡಿಪಾಜಿಟ್ ಮೊಬಲಗಿನ ಮೇಲಿನ ಹಕ್ಕು ಕಂಟ್ರಾಕ್ಟ್‌ದಾರನಿಗೆ ತಪ್ಪಿಹೋಗುವದಲ್ಲದೆ ಕಂಟ್ರಾಕ್ಟ್ ದುಸರೆ ಹರಾಜು ಮಾಡಿಸಿ ಅದರಿಂದ ಗವರ್ನಮೆಂಟಿಗೆ ಉಂಟಾಗಬಹುದಾದ ಲುಕ್ಸಾನು ಕಂಟ್ರಾಕ್ಟ್‌ದಾರನ ಅಥವಾ ಜಾಮೀನ್ದಾರ್ರ ಸ್ವತ್ತು ಜಪ್ತಿ ಹರಾಜು ಮೂಲಕ ವಸೂಲ್ ಮಾಡಲ್ಪಡುತ್ತೆ.

4. ವಾಯಿದೆ ತಾರೀಖಿನ ವಳಗೆ ಖಿಸ್ತು ಮೊಬಲಗು ಪಾವತಿ ಆಗದೆ ನಿಂತರೆ ವರುಷ ಬಂದಕ್ಕೆ ಶೇಕಡಾ ಆರು ರೂಪಾಯಿ ಪ್ರಕಾರ ಬಡ್ಡಿಯೂ ವಸೂಲ್ ಮಾಡಲ್ಪಡುತ್ತೆ.

5. ಹರಾಜುದಾರನು ತನ್ನ ಕಂಟ್ರಾಕ್ಟ್ ಹಣದ ಮೇಲೆ ರೂಪಾಯಿ ಬಂದಕ್ಕೆ ಬಂದು ಆಣೆ ಪ್ರಕಾರ ಲೋಕಲ್ ಸೆಸ್ ಕೊಡಬೇಕು.

6. ಕಂಟ್ರಾಕ್ಟ್‌ದಾರನಿಂದಲೇ ಆಗಲಿ ಅಥವಾ ಅವನ ಜಾಮೀನುದಾರರಿಂದಲೇ ಆಗಲಿ ಬರಬೇಕಾದ ಬಾಕಿಯನ್ನು ಜಾಮೀನು ಕಂದಾಯದ ಬಾಕಿ ವಸೂಲ್ ಮಾಡುವದಕ್ಕೆ ಇರತಕ್ಕ ರೂಲ್ಸು ಪ್ರಕಾರ ವಸೂಲ್ ಮಾಡಲ್ಪಡುವದು.

7. ಕಂಟ್ರಾಕ್ಟ್‌ದಾರನು ಪ್ರತಿ ದಿನವೂ ವಸೂಲ್ ಮಾಡುವ ಮೊಬಲಗಿಗೆ ಬಂದು ಲೆಕ್ಕದ ಬುಕ್ಕು ಇಟ್ಟುರಬೇಕು. ಇದು ಡೆಪ್ಯುಟಿ ಕಮಿಷನರ್ ಯವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖೆ ಮಾಡಲ್ಪಡುವದಕ್ಕೆ ಖುಲ್ಲಾ ಇರಬೇಕು.

8. ಕಂಟ್ರಾಕ್ಟ್‌ದಾರನು ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ಟೋಲ್ ಶಿವಾಯಿ ಮತ್ತ್ಯಾವದನ್ನೂ ವಸೂಲ್ ಮಾಡಕೂಡದು. ಆದರಲ್ಲಿ ನಮೂದಿಸುವ ದರದಂತೆಯೇ ವಸೂಲ್ ಮಾಡಬೇಕು. ಇದಕ್ಕೆ ವಿರೋಧವಾಗಿ ನಡದರೆ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಗುರಿಯಾಗುವದಲ್ಲದೆ ಕಂಟ್ರಾಕ್ಟ್ ಸಹ ರದ್ದು ಮಾಡಲ್ಪಡುವದು.

9. ಸೈನ್ಯ, ಮಿಲಿಟರಿ ಸಾಮಾನು, ಡ್ಯೂಟಿಮೇಲಿರುವ ಪೊಲೀಸ್ ಅಥವಾ ಇತರ ಸರ್ಕಾರದ ಆಫಿಸರು ಮತ್ತು ಸರ್ಕಾರಿ ಸಾಮಾನೆಂದು ಆ ಇಲಾಖೆಯ ಮುಖ್ಯಾಧಿಕಾರಿಯಿಂದ ಪಡೆದ ಸರಟಿಫಿಕೇಟನೊಡನೆ ಇರುವ ಸರ್ಕಾರಿ ಸಾಮಾನು ಈ ಸೇತುವೆ ಮೇಲೆ ಹೋದರೆ ಕಂಟ್ರಾಕ್ಟ್‌ದಾರನು ಟೋಲ್ ವಸೂಲ್ ಮಾಡಕೂಡದು.

10. ವಸೂಲ್ ಮಾಡಲು ಅಧಿಕಾರ ಕೊಟ್ಟರುವ ಟೋಲಿನ ಬಂದು ಪಟ್ಟಯನ್ನು ಇಂಗ್ಲೀಷು ಮತ್ತು ಕನ್ನಡ ಭಾಷೆಯ ಸ್ಪುಟವಾದ ಅಕ್ಷರಗಳಲ್ಲಿ ಬರದು ಟೋಲ್ ಗೇಟ್ ಹತ್ತರ ಎಲ್ಲರಿಗೂ ಕಾಣುವಂಥಾ ಸ್ಥಳದಲ್ಲಿ ಹಚ್ಚಬೇಕು.